ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಸಹಾಯಕ ಕಾರ್ಯಪಾಲಕ ಅಭಿಯಂತರರು ಕಛೇರಿ,
ಉತ್ತರಹಳ್ಳಿ ಉಪವಿಭಾಗ, ಬೆಂಗಳೂರು.

---

ಸಂ:ಸ.ಕಾ.ಅ(ಉ)/ಪಿಆರ್/ 396 /20-21 ದಿನಾಂಕ:~~21~~ 25-11-2020

**ದಿನಾಂಕ:21-11-2020ರಂದು ನಡೆದ 184-ಉತ್ತರಹಳ್ಳಿ ವಾರ್ಡ್ ಸಮಿತಿಯ ಸಭೆಯ ನಡುವಳಿಗಳು**

ಮಾನ್ಯ ಆಯುಕ್ತರವರ ಆದೇಶದ ದಿನಾಂಕ:21-09-2020ರ ಮೇರೆಗೆ ವಾರ್ಡ್ ಸಮಿತಿಯನ್ನು ರಚಿಸಲಾಗಿದ್ದು, ದಿನಾಂಕ:21-11-2020ರ ಶನಿವಾರ ಅಪರಾಹ್ನ 12.00 ಘಂಟೆಗೆ ವಾರ್ಡ್ ನಂ:184 ಉತ್ತರಹಳ್ಳಿ, ವಾರ್ಡ್ ಮಟ್ಟದ ಸಮಿತಿಯ ಸಭೆಯನ್ನು ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಸಭೆಯ ಅಧ್ಯಕ್ಷರಾದ ನೋಡಲ್ ಅಧಿಕಾರಿಗಳು ಸಭೆಯನ್ನು ಪ್ರಾರಂಭಿಸಿ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಗಳಿಗೂ ಹಾಗೂ ಸ್ಥಳೀಯ ಸಂಘ ಸಂಸ್ಥೆಯವರಿಗೆ ಸ್ವಾಗತ ಕೋರಿದ್ದು, ಸಭೆಯನ್ನು ಪ್ರಾರಂಭಿಸಿದರು.

**ಸಭೆಗೆ ಹಾಜರಿದ್ದವರು:**

| ಕ್ರಮಸಂಖ್ಯೆ | ಹಾಜರಿದ್ದವರ ಹೆಸರು | ಪದನಾಮ ಅಥವಾ ಇಲಾಖೆ | ಹಾಜರಾತಿ |
|---|---|---|---|
| 1 | ಶ್ರೀಮತಿ ಚೈತ್ರಾ ಹೊನ್ನಾಪುರ | ಅಧ್ಯಕ್ಷರು ವಾಡ್ ನೋಡಲ್ ಅಧಿಕಾರಿ | ಹಾಜರಿದ್ದವರು |
| 2 | ಶ್ರೀ ಎಂ ಜಿ ಕುಮಾರ್ | ಕಾರ್ಯದರ್ಶಿಗಳು | ಹಾಜರಿದ್ದವರು |
| 3 | ಶ್ರೀ ಶಶಿಕುಮಾರ್ | ಹಿರಿಯ ಆರೋಗ್ಯ ಪರಿವೀಕ್ಷಕರು | ಹಾಜರಿದ್ದವರು |
| 4 | ಶ್ರೀ ರಿಶೀಕ್ ರಾಕೇಶ್ | ಅಭಿಜ್ಞಾನ ಪೌಂಡೇಶನ್ ಸ್ಥಳೀಯ ಸಂಘ | ಹಾಜರಿದ್ದವರು |
| 5 | ಡಾ॥ ನಿಖಿಲ್ | ಪ್ರಾಥಮಿಕ ಆರೋಗ್ಯ ಕೇಂದ್ರ | ಹಾಜರಿದ್ದವರು |
| 6 | ಶ್ರೀ ಎನ್ ಕೃಷ್ಣಮೂರ್ತಿ | ಮೌಲ್ಯಮಾಪಕರು | ಹಾಜರಿದ್ದವರು |
| 7 | ಶ್ರೀಮತಿ ಸುಷ್ಮಾ ಎಸ್ | ಕರಗಳು, ಬಿಬಿಎಂಪಿ | ಹಾಜರಿದ್ದವರು |
| 8 | ಶ್ರೀಮತಿ ವರಲಕ್ಷ್ಮೀ ಬಾಲಾಜಿ | ಮಂತ್ರಿ, ಟ್ರ್ಯಾಕ್‌ವಿಲ್,ಆರ್.ಡಬ್ಲ್ಯೂ.ಎ | ಹಾಜರಿದ್ದವರು |
| 9 | ಶ್ರೀ ಎ.ಪಿ ಕಾಮತ್ | ಮಂತ್ರಿ, ಟ್ರ್ಯಾಕ್‌ವಿಲ್,ಆರ್.ಡಬ್ಲ್ಯೂ.ಎ | ಹಾಜರಿದ್ದವರು |

ಕಾರ್ಯದರ್ಶಿ
ವಾರ್ಡ್ ನಂ:184 ಉತ್ತರಹಳ್ಳಿ

ಅಧ್ಯಕ್ಷರು
ವಾರ್ಡ್ ನಂ:184 ಉತ್ತರಹಳ್ಳಿ

Scanned with CamScanner

| | | | |
|---|---|---|---|
| 10 | ಶ್ರೀ ಕೆ.ಪಿ ಪ್ರಸಾದ್ | ಮಂತ್ರಿ. ಟ್ರ್ಯಾಕ್‌ವಿಲ್.ಆರ್.ಡಬ್ಲ್ಯೂ.ಎ | ಹಾಜರಿದ್ದವರು |
| 11 | ಶ್ರೀ ಬಿ ಎನ್ ಜಗಧೀಶ್ | ಜಯನಗರ, ಹೌಸಿಂಗ್ ಸೊಸೈಟಿ ಲೇಔಟ್ ಆರ್.ಡಬ್ಲ್ಯೂ.ಎ | ಹಾಜರಿದ್ದವರು |
| 12 | ಶ್ರೀ ಎಸ್.ಎನ್ ಮನೋಹರ್ | ಜಯನಗರ, ಹೌಸಿಂಗ್ ಸೊಸೈಟಿ ಲೇಔಟ್ ಆರ್. ಡಬ್ಲ್ಯೂ .ಎ | ಹಾಜರಿದ್ದವರು |
| 13 | ಶ್ರೀ ಹರ್ಷ ಪಿ | ಜಯನಗರ, ಹೌಸಿಂಗ್ ಸೊಸೈಟಿ ಲೇಔಟ್ ಆರ್. ಡಬ್ಲ್ಯೂ .ಎ | ಹಾಜರಿದ್ದವರು |
| 14 | ಶ್ರೀ ಶ್ರೀನಿವಾಸ್ | ಬಿ.ಡಬ್ಲ್ಯೂ.ಎಸ್.ಎಸ್.ಬಿ | ಹಾಜರಿದ್ದವರು |
| 15 | ಶ್ರೀ ಅನಿಲ್ ಕುಮಾರ್ | ಎ.ಇ ಬೆಸ್ಕಾಂ | ಹಾಜರಿದ್ದವರು |
| 16 | ಶ್ರೀ ನಾಗರಾಜನ್ ಬಿ.ಎಸ್ | ಎ.ಜಿ ಎಸ್ ಲೇಔಟ್ ಅಧ್ಯಕ್ಷರು | ಹಾಜರಿದ್ದವರು |
| 17 | ಶ್ರೀ ಫಣೀರಾಮ್‌ಚಂದ್ರ | ಪಾಂ.ಸ್ಪ್ರಿಂಗ್‌ಲೇಔಟ್. ಆರ್. ಡಬ್ಲ್ಯೂ .ಎ | ಹಾಜರಿದ್ದವರು |
| 18 | ಶ್ರೀ ನಾಗೇಶ್ವರ್ ರಾವ್ | ಪಾಂ.ಸ್ಪ್ರಿಂಗ್ ಲೇಔಟ್. ಆರ್. ಡಬ್ಲ್ಯೂ .ಎ | ಹಾಜರಿದ್ದವರು |

**ಸಭೆಯ ನಡುವಳಿಗಳು:-**

**ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ:-**

ಸಭೆಯನ್ನು ಉದ್ದೇಶಿಸಿ ನೋಡಲ್ ಅಧಿಕಾರಿಗಳು ಕೋವಿಡ್-19 ಸಾಂಕ್ರಾಮಿಕ ರೋಗ ಹಿನ್ನೆಲೆ ಸಭೆಯಲ್ಲಿ ಉಪಸ್ಥಿತರಿಂದ ಆರೋಗ್ಯಾಧಿಕಾರಿಗಳು ಹಾಗೂ ವೈದ್ಯರನ್ನು ಉದ್ದೇಶಿಸಿ ಕೋವಿಡ್-19, ಟೆಸ್ಟಿಂಗ್ ವಾರ್ಡ್ ಮಟ್ಟದಲ್ಲಿ ಪ್ರತಿದಿನ ನಡೆಸಲಾಗುತ್ತಿದ್ದು, ಒಟ್ಟಾರೆ ವಾರ್ಡ್ ಮಟ್ಟದಲ್ಲಿ ಏಳು ಕೋವಿಡ್ ಟೆಸ್ಟಿಂಗ್ ಕ್ಯಾಂಪ್‌ಗಳನ್ನು ಹಾಕಲಾಗಿದ್ದು ಒಂದು ಮೊಬೈಲ್ ಕ್ಯಾಂಪ್ ಕಾರ್ಯನಿರ್ವಹಿಸುತ್ತಿದ್ದು ಕೋವಿಡ್ ಟೆಸ್ಟಿಂಗ್ ಪ್ರಕ್ರಿಯೆಯನ್ನು ನಡೆಸಲಾಗುತ್ತಿರುವುದಾಗಿ ಹಿರಿಯ ಆರೋಗ್ಯಾಧಿಕಾರಿಗಳು ತಿಳಿಸುತ್ತಾರೆ. ಸಭೆಯನ್ನು ಉದ್ದೇಶಿಸಿ ಉಪಸ್ಥತರಿಂದ ಆರೋಗ್ಯಾಧಿಕಾರಿಗಲೂ ಒಟ್ಟಾರೆ ವಾರ್ಡ್ ಮಟ್ಟದಲ್ಲಿ 184 ಆಕ್ಟಿವ್ ಪ್ರಕರಣಗಳಿದ್ದು 450 ರಿಂದ 500 ಟೆಸ್ಟಿಂಗ್‌ಗಳು ನಡೆಯುತ್ತಿರುವುದಾಗಿ ತಿಳಿಸಿರುತ್ತಾರೆ. ಸಭೆಯಲ್ಲಿ ಉಪಸ್ಥಿತರಿರುವ ಆರ್.ಡಬ್ಲ್ಯೂ. ಎ ಸದಸ್ಯರೊಂದಿಗೆ ಸಮನ್ವಯದ ಮೂಲಕ ಟೆಸ್ಟಿಂಗ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಆರೋಗ್ಯಾಧಿಕಾರಿಗಳಿಗೆ ಸೂಚಿಸಲಾಯಿತು. ವಾರ್ಡ್ ಮಟ್ಟದಲ್ಲಿನ ಕಂದಾಯ ಅಧಿಕಾರಿಗಳೊಡನೆ ಸಮನ್ವಯ ಸಾಧಿಸಿ ಟೆಸ್ಟಿಂಗ್ ಮಾಡಿಸಲು ಜನರನ್ನು ಕರೆತರಲು ಸೂಚಿಸಲಾಗಿದ್ದು,

**ಘನತ್ಯಾಜ್ಯ ನಿರ್ವಹಣೆ ಬಗ್ಗೆ:-**

- ಸಭೆಯನ್ನು ಉದ್ದೇಶಿಸಿ ಹಿರಿಯ ಆರೋಗ್ಯಾಧಿಕಾರಿಗಳಾದ ವಾರ್ಡ್ ಮಟ್ಟದಲ್ಲಿ 35 ಆಟೋ ಟಿಪ್ಪರ್‌ಯಿದ್ದು, 5 ಕಾಂಪ್ಯಾಕ್ಟ್‌ಗಳು ನಿರ್ವಹಿಸುತ್ತಿರುವುದಾಗಿ ತಿಳಿಸಿದರು.
- ವಾರ್ಡ್ ವ್ಯಾಪ್ತಿಯ ಆರೋಗ್ಯ ಅಧಿಕಾರಿಗಳು, ಗುತ್ತಿಗೆದಾರರು ಸೂಪರ್ ವೈಸರ್ ಉಪಸ್ಥಿತರಿದ್ದು, ಘನತ್ಯಾಜ್ಯ ವಿಷಯವಾಗಿ ಬ್ಲಾಕ್ ಸ್ಪಾಟ್‌ಗಳನ್ನು ಪ್ರತಿದಿನ ಪರಿವೀಕ್ಷಿಸಿ, ಅದನ್ನು ನಿರ್ಮೂಲನೆ ಮಾಡುವಲ್ಲಿ ಕ್ರಮವಹಿಸಲು ಸೂಚಿಸಲಾಯಿತು.

ಕಾರ್ಯದರ್ಶಿ
ವಾರ್ಡ್ ನಂ:184 ಉತ್ತರಹಳ್ಳಿ

ಅಧ್ಯಕ್ಷರು
ವಾರ್ಡ್ ನಂ:184 ಉತ್ತರಹಳ್ಳಿ

Scanned with CamScanner

- ಹಸಿ ಮತ್ತು ಒಣ ತ್ಯಾಜ್ಯವನ್ನು ಪ್ರತ್ಯೇಕವಾಗಿ ಬೇರ್ಪಡಿಸುವ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವಲ್ಲಿ ಆರೋಗ್ಯಾಧಿಕಾರಿಗಳು ಆರ್. ಡಬ್ಲ್ಯೂ ಎ ಸದಸ್ಯರೊಡನೆ ಸಮಾಲೋಚಿಸಿ ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳುವುದಾಗಿ ಸಭೆಯಲ್ಲಿ ಸೂಚಿಸಲಾಯಿತು.
- ವಾರ್ಡ್ ಮಟ್ಟದಲ್ಲಿಯ ಕಂಡು ಬರುತ್ತಿರುವ ಕಪ್ಪು ಕಲೆಗಳನ್ನು ನಿರ್ಮೂಲನೆ ಮಾಡುವ ನಿಟ್ಟಿನಲ್ಲಿ ಸೂಕ್ತ ಸ್ಥಳಗಳಲ್ಲಿ ಕಸದ ತೊಟ್ಟಿಗಳನ್ನು ಇಡುವ ಬಗ್ಗೆ ಆರ್.ಡಬ್ಲ್ಯೂ.ಎ ಸದಸ್ಯರು ಪ್ರಸ್ತಾಪಿಸಿದ್ದು, ಈ ಬಗ್ಗೆ ಸಮಾಲೋಚಿಸಿ ನಿಯಮಾನುಸಾರ ಅವಕಾಶವಿದ್ದಲ್ಲಿ ಕ್ರಮವಹಿಸಲು ಸಭೆಯಲ್ಲಿ ಉಪಸ್ಥಿತರಿದ್ದ ಆರೋಗ್ಯಾಧಿಕಾರಿಗಳಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು.
- ವಾರ್ಡ್ ಮಟ್ಟದಲ್ಲಿ ಪ್ರತಿ ಮನೆಯಲ್ಲಿ ಹಸಿ ಮತ್ತು ಒಣ ತ್ಯಾಜ್ಯ ಪ್ರತ್ಯೇಕವಾಗಿ ಸಂಗ್ರಹಣೆ ಆಗುತ್ತಿರುವ ಬಗ್ಗೆ ಹಾಗೂ ಆಟೋ ಟಿಪ್ಪರ್/ತಳ್ಳುವ ಗಾಡಿ ಮನೆಮನೆಗೆ ತಲುಪುತ್ತೀರುವ ಬಗ್ಗೆ ಆರೋಗ್ಯಾಧಿಕಾರಿಗಳು ಹಾಗೂ ಸೂಪರ್ ವೈಸರ್‌ಗಳು ಗಮನಹರಿಸಲು ಕ್ರಮ ತೆಗೆದುಕೊಳ್ಳಲು ನೂಡಲ್ ಅಧಿಕಾರಿಗಳು ಸೂಚಿಸಿದರು.

<u>ಕಂದಾಯ:–</u>

ಸಂಬಂಧಪಟ್ಟ ಅಧಿಕಾರಿಗಳು ಸಭೆಯಲ್ಲಿ ಹಾಜರಿಲ್ಲದ ಕಾರಣ ಮುಂದಿನ ಸಭೆಯಲ್ಲಿ ವಿಷಯದ ಬಗ್ಗೆ ಚರ್ಚಿಸಲಾಗುವುದು.

<u>ವಿದ್ಯುತ್:–</u>

ಸಭೆಯಲ್ಲಿ ಉಪಸ್ಥಿತರಿದ್ದ ಆರ್.ಡಬ್ಲ್ಯೂ.ಎ ರವರು ಹೊಸದಾಗಿ ಬೀದಿ ದೀಪಗಳನ್ನು ಅನುಷ್ಠಾನ ಮಾಡುವ ವಿಚಾರವಾಗಿ ಕೋರಿದ್ದು, ಈ ವಿಷಯವಾಗಿ ಗ್ಲೋಬಲ್ ಟೆಂಡರ್ ಬಂದ ನಂತರ ಹೊಸ ದೀಪಗಳನ್ನು ಹಾಕುವ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವುದಾಗಿ ವಿದ್ಯುತ್ ವಿಭಾಗದವರೆಗೆ ತಿಳಿಸಲಾಯಿತು.

<u>ಬೆಸ್ಕಾಂ:–</u>

ಬೆಸ್ಕಾಂ ವಿಭಾಗದವರು ಮರಗಳನ್ನು ಕಡೆದು ಕಾರ್ಯ ಮುಗಿದ ನಂತರ ಕಡೆದ ಮರ ಮತ್ತು ಕೊಂಬೆಗಳನ್ನು ರಸ್ತೆಯಲ್ಲೇ ಹಾಕಿ ಹೋಗುವ ಬಗ್ಗೆ ದೂರುಗಳು ಬಂದಿದ್ದು ಸೂಕ್ತ ವ್ಯವಸ್ಥೆ ಕಲ್ಪಿಸಿ ರಸ್ತೆಯಿಂದ ಕಡೆದ ರೆಂಬೆ–ಕೊಂಬೆಗಳನ್ನು ತೆಗೆದುಹಾಕುವ ನಿಟ್ಟಿನಲ್ಲಿ ಕ್ರಮವಹಿಸಲು ಬೆಸ್ಕಾಂ ಅಧಿಕಾರಿಗೆ ಸೂಚಿಸಲಾಯಿತು.

<u>ಕಾಮಗಾರಿ ಇಲಾಖೆ:–</u>

- ಕಾರ್ಯದರ್ಶಿಗಳಾದ ಸಹಾಯಕ ಅಭಿಯಂತರರು ಶ್ರೀ ಕುಮಾರ್‌ರವರು ಸಭೆಯಲ್ಲಿ ಉಪಸ್ಥಿತರಿದ್ದು, ವಾರ್ಡ್ ಮಟ್ಟದಲ್ಲಿ ರಸ್ತೆ ಗುಂಡಿ (ಪಾಟ್ ಹೋಲ್) ನಿರ್ವಾಹಣೆ ಆಗುತ್ತಿರುವ ಬಗ್ಗೆ ತಿಳಿಸಿರುತ್ತಾರೆ.
- ಪೂರ್ಣ ಪ್ರಜ್ಞಾ ಲೇಔಟ್ aspalting ವಿಚಾರವಾಗಿ ಕ್ರಮವಹಿಸುವ ಬಗ್ಗೆ ಕೋರಲಾಗಿದ್ದು, ಸಹಾಯಕ ಅಭಿಯಂತರರಿಗೆ ಸ್ಥಳ ಪರಿವೀಕ್ಷಿಸಿ ಕ್ರಮವಹಿಸಲು ಸೂಚಿಸಲಾಯಿತು

ಕಾರ್ಯದರ್ಶಿ
ವಾರ್ಡ್ ನಂ:184 ಉತ್ತರಹಳ್ಳಿ

ಅಧ್ಯಕ್ಷರು
ವಾರ್ಡ್ ನಂ:184 ಉತ್ತರಹಳ್ಳಿ

Scanned with CamScanner

- ಜಕ್ಕಮ ಲೇಔಟ್ ಬಳಿ ಮುಖ್ಯ ರಸ್ತೆಯಲ್ಲಿ ಒಳಚರಂಡಿ ಮುಚ್ಚುವ ಸ್ಲಾಬ್ಸ್ ಅಳವಡಿಸುವ ಬಗ್ಗೆ ಕ್ರಮ ಕೋರಿದ್ದು, ಸಹಾಯಕ ಅಭಿಯಂತರರಿಗೆ ಪರಿಶೀಲಿಸಿ ಕ್ರಮವಹಿಸಲು ಸೂಚಿಸಲಾಯಿತು.
- ಗುಬ್ಬಲಾಲ ರಸ್ತೆ ಮಂತ್ರಿ ಟ್ರ್ಯಾಕ್‌ವಿಲ್ ಹತ್ತಿರ ರಸ್ತೆ ಹಾಳಾಗಿದ್ದು, ಡಾಂಬರೀಕರಣ ಮಾಡುವ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವುದಾಗಿ ಸಹಾಯಕ ಅಭಿಯಂತರರಿಗೆ ಸೂಚಿಸಲಾಯಿತು.
- ವಾರ್ಡ್ ಮಟ್ಟದಲ್ಲಿನ ಜೆ.ಹೆಚ್.ಎಸ್ ಲೇಔಟ್ ಎ.ಜಿ.ಸ್ ಲೇಔಟ್ ರೋಡ್ ಇಂಡಿಕೇಷನ್ ಬೋರ್ಡ್ಸ್ ದುರಸ್ಥಿಯಲ್ಲಿರುವುದಾಗಿ ಆರ್.ಡಬ್ಲ್ಯೂ.ಎ ರವರು ದೂರಿದ್ದು, ಈ ವಿಷಯವಾಗಿ ಪರಿಶೀಲಿಸಿ ಪೈಟಿಂಗ್ ಮಾಡುವಲ್ಲಿ ಕ್ರಮವಹಿಸಲು ಸಹಾಯಕ ಅಭಿಯಂತರರಿಗೆ ಸೂಚಿಸಲಾಯಿತು.
- ಹಿಂದಿನ ಸಭೆಯಲ್ಲಿ ಈ ವಿಷಯವಾಗಿ ವಿವರಣೆ ಕೋರಿದ್ದು, ಪಾದಕ ಮಂದಿರ ಜೆ.ಹೆಚ್.ಎಸ್ ಲೇಔಟ್ 1ನೇ ಹಂತ ಜಾಗದಲ್ಲಿ ಟಾರ್ ರೋಡ್ ವ್ಯವಸ್ಥೆ 20 ವರ್ಷಗಳಿಂದ ಆಗಿರುವುದಿಲ್ಲವಾಗಿ ದೂರಿದ್ದು, ಈ ವಿಷಯವಾಗಿ ಪರಿಶೀಲಿಸಿ ವರದಿ ನೀಡಲು ಸಹಾಯಕ ಅಭಿಯಂತರರಿಗೆ ಸೂಚಿಸಲಾಯಿತು. ಹಾಗೂ ಸೂಕ್ತ ಕ್ರಮ ತೆಗೆದುಕೊಳ್ಳುವುದಾಗಿ ಸಹಾಯಕ ಅಭಿಯಂತರರಿಗೆ ಸೂಚಿಸಲಾಯಿತು.
- ಜೆ.ಹೆಚ್.ಎಸ್ ಲೇಔಟ್ ರಲ್ಲಿ ಸರ್ವೀಸ್ ಪ್ರೈವೈಡರಸ್ಸ್ (ಏರ್‌ಟೆಲ್/ಜಿಯೋ/ಟಾಟಾಸ್ಕೈ)ರವರುಗಳು ರಸ್ತೆ ಅಗೆದು ರೆಸ್ಟೋರೇಷನ್ ಕಾರ್ಯವನ್ನು ಮಾಡುವಲ್ಲಿ ನಿರ್ಲಕ್ಷ್ಯದಿಂದಾಗಿ ರಸ್ತೆ ಹಾಳಾಗುತ್ತಿರುವುದಾಗಿ ಪ್ರಸ್ತಾಪಿಸಿದ್ದು, ಈ ವಿಷಯವಾಗಿ ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲು ಸಭೆಯಲ್ಲಿ ಉಪಸ್ಥಿತರಿಂದ ಸಹಾಯಕ ಅಭಿಯಂತರರಿಗ ಸೂಚಿಸಲಾಯಿತು.

<u>ಬಿ.ಡಬ್ಲ್ಯೂ.ಎಸ್.ಎಸ್.ಬಿ</u>

- ಪ್ಲಾಂ ಸ್ಪ್ರಿಂಗ್ ಲೇಔಟ್ ಸಂಬಂಧಿಸಿದಂತೆ ಸ್ಯಾನಿಟರಿ ವಿಚಾರವಾಗಿ ಕಾಮಗಾರಿ ಪೂರ್ಣಗೊಳ್ಳದೆ ತೊಂದರೆ ಉಂಟಾಗುತ್ತಿರುವ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಹಿಂದಿನ ವಾರ್ಡ್ ಸಭೆಯಲ್ಲಿ ಸೂಚಿಸಲಾಗಿದ್ದು,
- ಈ ವಿಷಯವಾಗಿ ಬಿ.ಡಬ್ಲ್ಯೂ.ಎಸ್.ರವರಿಂದ ಕ್ರಮ ತೆಗೆದುಕೊಳ್ಳಬೇಕಾಗಿದೆ ಎಂದು ಸಭೆಯಲ್ಲಿ ತಿಳಿಸಲಾಗಿದ್ದು, ಸದ್ಯಕ್ಕೆ ಪ್ರಸ್ತುತ ಕಾರ್ಯ ಪೂರ್ಣಗೊಳ್ಳುವವರೆಗೂ ಸ್ಯಾನಿಟರಿ ಒಳಚರಂಡಿ ಕ್ಲಿಯರೆನ್ಸ್ ಮಾಡುವಲ್ಲಿ ಕ್ರಮವಹಿಸುವುದಾಗಿ ಸಭೆಯಲ್ಲಿ ಉಪಸ್ಥಿತರಿಂದ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಯವರಿಗೆ ಸೂಚಿಸಲಾಯಿತು. ಮುಂದಿನ ಸಭೆಯಲ್ಲಿ ತೆಗೆದುಕೊಂಡ ಕ್ರಮಗಳ ಬಗ್ಗೆ ವರದಿ ಸಲ್ಲಿಸುವುದಾಗಿ ತಿಳಿಸಲಾಯಿತು.
- ಜೆ.ಹೆಚ್.ಎಸ್ ಲೇಔಟ್ ನಲ್ಲಿ ಒಳಚರಂಡಿ ವ್ಯವಸ್ಥೆಯು ಹದಗೆಟ್ಟಿದ್ದು, ಮಳೆಗಾಲದಲ್ಲಿ ಚರಂಡಿ ಯಿಂದ ನೀರು ಹೊರಬಂದು ನಿವಾಸಿಗಳಿಗೆ ತೊಂದರೆ ಉಂಟಾಗುತ್ತಿದ್ದು, ರೋಹನ್ ಆಕೃತಿ ಹಾಗೂ ಪಾಧೂಕ ಮಂದಿರದ ಪ್ರದೇಶಗಳಲ್ಲಿ ಒಳಚರಂಡಿ ದುರವ್ಯವಸ್ಥೆಯಿಂದಾಗಿ ಸ್ಥಳೀಯರಿಗೆ ಅಪಾಯಕಾರಿಯಾಗಿದ್ದು, ಈ ವಿಷಯವಾಗಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ವಿಭಾಗದವರು ಪರಿಶೀಲಿಸಿ ವ್ಯವಸ್ಥಿತ ಕ್ರಮತೆಗೆದುಕೊಳ್ಳುವುದಾಗಿ ಸೂಚಿಸಲಾಯಿತು.

| | |
|---|---|
| ಕಾರ್ಯದರ್ಶಿ | ಅಧ್ಯಕ್ಷರು |
| ವಾರ್ಡ್ ನಂ:184 ಉತ್ತರಹಳ್ಳಿ | ವಾರ್ಡ್ ನಂ:184 ಉತ್ತರಹಳ್ಳಿ |

Scanned with CamScanner

- ಪ್ಲಾಂ ಸ್ಟಿಂಗ್ ಬಡಾವಣೆ ಹಾಗೂ ಜೆ.ಹೆಚ್.ಎಸ್. ಬಡಾವಣೆ ಆರ್.ಡಬ್ಲ್ಯೂ.ಎಗಳು ಕಾವೇರಿ ನೀರು ವ್ಯವಸ್ಥೆ ಕಲ್ಪಿಸುವ ಸಂಬಂಧ ನೀರಿನ ಪೈಪ್ ವ್ಯವಸ್ಥೆಯನ್ನು ಶೀಘ್ರ ಕಲ್ಪಿಸುವಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರಿಂದ ಕ್ರಮಕೈಗೊಂಡಿದ್ದು, ಈ ವಿಷಯವಾಗಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ವಿಭಾಗದವರು ಪರಿಶೀಲಿಸಿ ವ್ಯವಸ್ಥಿತ ಕ್ರಮತೆಗೆದುಕೊಳ್ಳುವುದಾಗಿ ಸೂಚಿಸಲಾಯಿತು.

**ಪೊಲೀಸ್:-**

ಪೋಲೀಸ್ ವಿಭಾಗದ ಅಧಿಕಾರಿಯು ಉಪಸ್ಥಿತರಿದ್ದು,

- ದೊಡ್ಡಕಲ್ಲಸಂದ್ರ ಮೆಟ್ರೋ ಸ್ಟೇಷನ್ ಹಾರ್ಟ್ ನೋ ಪಾರ್ಕಿಂಗ್ ಜೋನ್ ಆಗಿದ್ದು, ರಾಘವೇಂದ್ರ ಕ್ಯಾಂಟೀನ್ ಬಳಿ ಹೆಚ್ಚು ವಾಹನಗಳು ಪಾರ್ಕಿಂಗ್ ಆಗುತ್ತಿದ್ದು, ತೊಂದರೆಯಾಗುತ್ತಿದ್ದು.
- ಸಂಚಾರವನ್ನು ಸುಲಭಗೊಳಿಸಲು ಗುಬ್ಬಲಾಲ ರಸ್ತೆ ಮತ್ತು ಕನಕಪುರ ರಸ್ತೆ ಜಂಕ್ಷನ್‌ನಲ್ಲಿ ಮೀಡಿಯನ್ ಮತ್ತು ರೌಂಡ್ ಅಬೌಟ್ ನಿರ್ಮಾಣ. ಸ್ಥಳವು ಈಗ ದೊಡ್ಡ ಅವ್ಯವಸ್ಥೆಯಾಗಿದೆ ಕೆಲವು ಪುಷ್‌ಕಾರ್ಟ್ ಅಂಗಡಿಗಳು ಸುಗಮ ಸಂಚಾರಕ್ಕೆ ಅಡ್ಡಿಮಾಡುತ್ತಿರುವುದಾಗಿ ಆರ್.ಡಬ್ಲ್ಯೂ.ಎ ರವರು ತಿಳಿಸಿರುತ್ತಾರೆ. ಈ ವಿಷಯವಾಗಿ ಟ್ರಾಫಿಕ್ ವಿಭಾಗದವರು ಅವಲೋಕಿಸಿ ಸಕ್ಷಮ ಪ್ರಾಧಿಕಾರದ ಮುಖೇನ ಕ್ರಮವಹಿಸುವುದಾಗಿ ಸೂಚಿಸಲಾಯಿತು.
- ಮೆಟ್ರೋ ರೈಲು ಕಾರ್ಯಚರಣೆ ನಂತರ ಮೇಲೆ ಪ್ರಸ್ತಾಪಿಸಿರುವ ರಸ್ತೆಯು ನಾಲ್ಕು ಚಕ್ರ ವಾಹನಗಳಿಗೆ ಮುಕ್ತ ಪಾರ್ಕಿಂಗ್ ಆಗಿಯೂ ಬಳಸಲಾಗುವ ಸಾಧ್ಯತೆಯಿರುವುದರಿಂದ ಗುಬ್ಬಲಾಲ ಮುಖ್ಯರಸ್ತೆಯನ್ನು ನ್ಯೂ ಪಾರ್ಕಿಂಗ್ ವಲಯವಾಗಿ ಪರಿವರ್ತಿಸುವ ಬಗ್ಗೆ ಪ್ರಸ್ತಾಪ ಆರ್.ಡಬ್ಲ್ಯೂ.ಎ ರವರು ನೀಡಿದ್ದು, ಈ ವಿಷಯವಾಗಿ ಟ್ರಾಫಿಕ್ ವಿಭಾಗದವರು ಅವಲೋಕಿಸಿ ಸಕ್ಷಮ ಪ್ರಾಧಿಕಾರದ ಮುಖೇನ ಕ್ರಮವಹಿಸುವುದಾಗಿ ಸೂಚಿಸಲಾಯಿತು.
- ರಾತ್ರಿ ವೇಳೆ ಡೆಬ್ರೀಸ್‌ಗಳನ್ನು ವಾರ್ಡ್‌ನಲ್ಲಿಯ ಕೆಲವು ಪ್ರದೇಶಗಳಲ್ಲಿ ಹಾಕುತ್ತಿದ್ದು ಈ ವಿಷಯವಾಗಿ ಪೆಟ್ರೋಲಿಂಗ್ ನಡೆಸಲು ಸೂಚಿಸಲಾಯಿತು.
- ಜೆ.ಹೆಚ್.ಬಿ.ಸಿ.ಎಸ್.ಲೇಔಟ್ ಪಾದುಕ ಮಂದಿರ ಬಳಿ ರಾತ್ರಿ ಹೊತ್ತು ದುಷ್ಕರ್ಮಿಗಳು ಕುಡಿದು ಲೇಔಟ್‌ನಲ್ಲಿ ಸ್ಥಳೀಯರಿಗೆ ತೊಂದರೆ ಉಂಟು ಮಾಡುತ್ತಿರುವ ಬಗ್ಗೆ ದೂರಿದ್ದು, ಈ ವಿಷಯವಾಗಿ ಪೊಲೀಸ್ ವಿಭಾಗದವರು ಸಾರ್ವಜನಿಕರ ರಕ್ಷಣೆಗಾಗಿ ರಾತ್ರಿಯ ವೇಳೆ ಪೆಟ್ರೋಲಿಂಗ್ ನಡೆಸಿ ಕ್ರಮವಹಿಸುವುದಾಗಿ ಉಪಸ್ಥಿತರಿಂದ ಅಧಿಕಾರಿಗೆ ಸೂಚಿಸಲಾಯಿತು.

ಮೇಲ್ಕಂಡಂತೆ ಈ ಎಲ್ಲಾ ಇಲಾಖೆಗಳ ವಿಷಯವಾಗಿ ದೂರುಗಳು ಇದ್ದಲ್ಲಿ, ತಿಳಿಸಲು ಸ್ಥಳೀಯ ಸಂಘ ಸಂಸ್ಥೆಗಳಿಗೆ ಕೇಳಲಾಗಿದ್ದು, ಪ್ರಸ್ತಾಪ ದೂರುಗಳ ಬಗ್ಗೆ ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಇಲಾಖೆಯ ಅಧಿಕಾರಿಗಳಿಂದ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲು ನೋಡಲ್ ಅಧಿಕಾರಿಗಳು ನಿರ್ದೇಶಿಸಿದ್ದು ವರದಿಗಳನ್ನು ಮುಂದಿನ ಸಭೆಯಲ್ಲಿ ನೀಡಲು ನಿರ್ದೇಶಿದರು.

| | |
|---|---|
| ಕಾರ್ಯದರ್ಶಿ | ಅಧ್ಯಕ್ಷರು |
| ವಾರ್ಡ್ ನಂ:184 ಉತ್ತರಹಳ್ಳಿ | ವಾರ್ಡ್ ನಂ:184 ಉತ್ತರಹಳ್ಳಿ |

Scanned with CamScanner

ಸಮಿತಿ ಸಭೆಗೆ ಆಗಮಿಸಿದ ಎಲ್ಲಾ ಅಧಿಕಾರಿಗಳಿಗೂ ಹಾಗೂ ಸಂಘ ಸಂಸ್ಥೆಯ ಸದಸ್ಯರಿಗೂ ನೋಡಲ್ ಅಧಿಕಾರಿಗಳಿಗೂ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿ

ವಾರ್ಡ್ ನಂ:184 ಉತ್ತರಹಳ್ಳಿ

ಅಧ್ಯಕ್ಷರು

ನೋಡಲ್ ಅಧಿಕಾರಿ

ವಾರ್ಡ್ ನಂ:184 ಉತ್ತರಹಳ್ಳಿ

ಪ್ರತಿಯನ್ನು:-

1. ಮಾನ್ಯ ವಿಶೇಷ ಆಯುಕ್ತರು (ಆಡಳಿತ) ರವರ ಅವಗಾಹನೆಗೆ ಸಲ್ಲಿಸಿದೆ.
2. ಕೌನ್ಸಿಲ್ ಕಾರ್ಯದರ್ಶಿ ರವರ ಅವಗಾಹನೆಗೆ ಸಲ್ಲಿಸಿದೆ.
3. ಮಾನ್ಯ ವಿಶೇಷ ಆಯುಕ್ತರು (ಬೊಮ್ಮನಹಳ್ಳಿ) ರವರ ಅವಗಾಹನೆಗೆ ಸಲ್ಲಿಸಿದೆ.
4. ಜಂಟಿ ಆಯುಕ್ತರು, ಬೊಮ್ಮನಹಳ್ಳಿ ವಲಯರವರ ಅವಗಾಹನೆ ಸಲ್ಲಿಸಿದೆ.
5. ಮುಖ್ಯ ಅಭಿಯಂತರರು, ಬೊಮ್ಮನಹಳ್ಳಿ ವಲಯ ರವರಿಗೆ.
6. ಮುಖ್ಯ ಆರೋಗ್ಯಾಧಿಕಾರಿಗಳು, ಬೊಮ್ಮನಹಳ್ಳಿ ವಲಯ ರವರಿಗೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿದ್ಯುತ್/ಕೆರೆ) ರವರಿಗೆ ಸೂಕ್ತ ಕ್ರಮಕ್ಕಾಗಿ
8. ವೈದ್ಯಕೀಯ ಆರೋಗ್ಯಾಧಿಕಾರಿಗಳು ಬೊಮ್ಮನಹಳ್ಳಿ ವಲಯ ರವರಿಗೆ.
9. ಅಧೀಕ್ಷಕ ಅಭಿಯಂತರರು (ಘನತ್ಯಾಜ್ಯ ನಿರ್ವಹಣೆ) ಅವಗಾಹನೆಗೆ ಸಲ್ಲಿಸಿದೆ.
10. ಕಾರ್ಯಪಾಲಕ ಅಭಿಯಂತರರು, ಬೊಮ್ಮನಹಳ್ಳಿ ವಲಯ ರವರಿಗೆ.
11. ಕಾರ್ಯಪಾಲಕ ಅಭಿಯಂತರರು , ಮೇಜರ್ ರೋಡ್ಸ್ ರವರಿಗೆ ಸೂಕ್ತ ಕ್ರಮಕ್ಕಾಗಿ
12. ಸಹಾಯಕ ಕಾರ್ಯಪಾಲಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ)
13 ಸಹಾಯಕ ಕಾರ್ಯಪಾಲಕ ಅಭಿಯಂತರರು (ಬೆಸ್ಕಾಂ)
14. ಆರಕ್ಷಕ ನಿರೀಕ್ಷಕರು (ಸುಬ್ರಹ್ಮಣ್ಯಪುರ ಪೋಲೀಸ್ ಠಾಣೆ-ಬೆಂಗಳೂರು) ರವರಿಗೆ ಸೂಕ್ತ ಕ್ರಮಕ್ಕಾಗಿ
15. ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ
16. ವಾರ್ಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ
17. ಕಛೇರಿ ಪ್ರತಿ.

Scanned with CamScanner